## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೃಷ್ಣದೇವರಾಯರ 500ನೇ ಪೀಠಾರೋಹಣ ಸ್ಮರಣಾರ್ಥ ಪಟ್ಟಾಭಿಷೇಕ ಆಚರಣೆಯ ಸಂಬಂಧ ಸಂಚಾರಿ ಶೌಚಾಲಯಗಳ ವ್ಯವಸ್ಥೆಗಾಗಿ ರೂ. 20.36 ಲಕ್ಷಗಳನ್ನು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯಡಿ ವೆಚ್ಚ ಮಾಡಿರುವ ಬಗ್ಗೆ - ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ಬಗ್ಗೆ-ಆದೇಶ.

ಓದಲಾಗಿದೆ:- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಪತ್ರ ಸಂಖ್ಯೆ. ಜಿಪಂಬ/ ಮುಲೆಅ/8003/2010-11, ದಿನಾಂಕ. 22-08-2011

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ. 22-08-2011ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಶ್ರೀ ಕೃಷ್ಣದೇವರಾಯರ 500ನೇ ಪೀಠಾರೋಹಣ ಸ್ಮರಣಾರ್ಥ ಪಟ್ಟಾಭಿಷೇಕ ಆಚರಣೆ ಸಂಬಂಧ ಹಂಪೆಯಲ್ಲಿ 75 ಎಂ.ಪಿ.ಸಿ. (Mobile Portable Chemical) ಟಾಯ್‌ಲೆಟ್‌ಗಳನ್ನು ವಿವಿಧ ಸ್ಥಳಗಳಲ್ಲಿ ಬಾಡಿಗೆ ಆಧಾರದ ಮೇಲೆ ಮೆ: ಸಾರಪ್ಲಾಸ್ಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಂದ ಪಡೆದು ಶೌಚಾಲಯ ವ್ಯವಸ್ಥೆಯನ್ನು ಮಾಡಿದ್ದು, ಈ ವ್ಯವಸ್ಥೆಯನ್ನು ಇನ್ನು 3 ದಿನಗಳಿಗೆ ಹೆಚ್ಚುವರಿಯಾಗಿ ಮುಂದುವರೆಸಿ ಒಟ್ಟು 7 ದಿನಗಳವರೆಗೆ ಈ ಕೆಳಗಿನಂತೆ ಹಣ ಪಾವತಿ ಮಾಡಲಾಗಿದೆಯೆಂದು;

| ವಿವರ | ಬಾಡಿಗೆ ದರ (ದಿನಕ್ಕೆ) | ಶೌಚಾಲಯಗಳ ಸಂಖ್ಯೆ | ಬಾಡಿಗೆ ಪಡೆದ ದಿನಗಳು | ಮೊತ್ತ |
|---|---|---|---|---|
| 1) ಪಾಶ್ಚಾತ್ಯ ಶೌಚಾಲಯ | 4136.25 | 05 | 07 | 1,44,769-00 |
| 2) ಭಾರತೀಯ ಶೌಚಾಲಯ | 3860.50 | 70 | 07 | 18,91,645-00 |
| ಒಟ್ಟು : | | | | 20,36,414-00 |

ಮತ್ತು ಮೇಲ್ಕಂಡ ವ್ಯವಸ್ಥೆಯನ್ನು ಟೆಂಡರ್ ಮೂಲಕ ನೀಡದೇ ದರಪಟ್ಟಿ ಮೂಲಕ ಈ ವ್ಯವಸ್ಥೆಯನ್ನು ಕಲ್ಪಿಸಲು ಆದೇಶ ನೀಡಲಾಗಿರುತ್ತದೆ. ಅಲ್ಲದೆ, ಮೇಲ್ಕಂಡ ಮೊತ್ತವನ್ನು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯಡಿಯಲ್ಲಿ ಐ.ಇ.ಸಿ. ಚಟುವಟಿಕೆಗಳ ಅನುದಾನದಿಂದ ಪಾವತಿ ಮಾಡಲಾಗಿದ್ದು, ಈ ಪಾವತಿಯು ಮಾರ್ಗಸೂಚಿಗಳ ಉಲ್ಲಂಘನೆಯಾಗಿರುತ್ತದೆ ಹಾಗೂ ಯಾವುದೇ ಸಂಗ್ರಹಣೆಯ ನಿಯಮಗಳನ್ನು ಅನುಸರಿಸದೇ ಪಾವತಿ ಮಾಡಲಾಗಿರುತ್ತದೆಯೆಂದು;

*(1) ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯ ಐ.ಇ.ಸಿ. ಅನುದಾನದಿಂದ 75 ಸಂಚಾರಿ ಶೌಚಾಲಯಗಳನ್ನು 7 ದಿನಗಳಿಗೆ ಬಾಡಿಗೆ ಆಧಾರದ ಮೇಲೆ ಪಡೆದಿರುವುದು ಸದರಿ ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿದಂತಾಗಿದೆ.*

(2) ಟೆಂಡರ್ ಕರೆಯುವುದನ್ನು ತಪ್ಪಿಸಲು ಅಂದಾಜು ಪಟ್ಟಿಗಳನ್ನು ರೂ. 1.00 ಲಕ್ಷ ಮಿತಿಯಲ್ಲಿ ಇರುವಂತೆ ವಿಭಾಗಿಸಿರುವುದು ಕೆ.ಟಿ.ಪಿ.ಪಿ. ಅಧಿನಿಯಮದ ಉಲ್ಲಂಘನೆಯಾಗಿರುತ್ತದೆ ಮತ್ತು ಟೆಂಡರ್ ಕರೆಯುವುದನ್ನು ತಪ್ಪಿಸಲು ಕಾಮಗಾರಿ ಅಲ್ಲದಿದ್ದರೂ ಸಂಗ್ರಹಣೆಯನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಪಡೆದಿರುವುದು ಸಹ ನಿಯಮಬಾಹಿರವಾಗಿದೆ.

(3) ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಲೆಕ್ಕಾಧಿಕಾರಿಗಳು ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯಲ್ಲಿ ಪಾವತಿಸಲು ಅನುಮೋದನೆಯಾಗಿದ್ದರೂ, ಯಾವುದೇ ಅನುಮೋದನೆ ಇಲ್ಲದೆ ಸ್ವಜಲಧಾರ ಯೋಜನೆಯಿಂದ ರೂ. 20.36 ಲಕ್ಷ ಪಾವತಿಸಿರುವುದು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತಾಗಿದೆ.

(4) ಕೆ.ಟಿ.ಪಿ.ಪಿ. ಅಧಿನಿಯಮದಡಿ ವಿನಾಯಿತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡಲಾಗಿದೆ. ಆದರೆ ಪಿ.ಆರ್.ಇ.ಡಿ. ವಿಭಾಗದಿಂದ ಟೆಂಡರ್ ಮೂಲಕ ಅಲ್ಲದೆ ನೇರವಾಗಿ ಸಂಗ್ರಹಣೆಯನ್ನು ಮಾಡಲು ಜಿಲ್ಲಾ ಪಂಚಾಯತ್ ಅನುಮತಿಸಿದೆ. 7 ದಿನಗಳಿಗೆ ಒಂದು ಪಾಶ್ಚಾತ್ಯ ಶೌಚಾಲಯಕ್ಕೆ ರೂ. 28,953.75 ಮತ್ತು ಒಂದು ಭಾರತೀಯ ಶೌಚಾಲಯಕ್ಕೆ ರೂ. 27,023.50 ಗಳಂತೆ ಬಾಡಿಗೆ ನೀಡಿರುವುದು ಅತೀ ಹೆಚ್ಚಾಗಿರುತ್ತದೆ. ಈ ಮೊತ್ತದಲ್ಲಿ ಒಳ್ಳೆಯ ಗುಣಮಟ್ಟದ ಖಾಯಂ ಶೌಚಾಲಯಗಳನ್ನು ನಿರ್ಮಿಸಬಹುದಾಗಿದೆ. ಕೇಂದ್ರ ಯೋಜನೆಯಿಂದ ರೂ. 20.36 ಲಕ್ಷ ವೆಚ್ಚ ಮಾಡಿದರೂ ಜಿಲ್ಲಾ ಪಂಚಾಯತಿಗೆ ಒಂದು ಆಸ್ತಿಯು ಆಗಿರುವುದಿಲ್ಲ ಮೇಲಾಗಿ ಎಲ್ಲಾ ಮೊತ್ತವು ಸರ್ಕಾರಕ್ಕೆ ನಷ್ಟವಾಗಿರುತ್ತದೆ.

(5) ಈ ಕಾರ್ಯಕ್ರಮ 3 ದಿನಗಳಿಗೆ ಮಾತ್ರ ಇದ್ದರೂ ಪ್ರಾರಂಭದಲ್ಲಿ 4 ದಿನಗಳಿಗೆ 75 ಶೌಚಾಲಯಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ನಂತರ 7 ದಿನಗಳಿಗೆ ಮುಂದುವರಿಸಲಾಗಿದೆ. ಮುಂದುವರಿಸಿದ ಕಾರಣ ಆಗಿರುವ ನಷ್ಟಕ್ಕೆ ಯಾವುದೇ ಸಮಂಜಸವಾದ ಕಾರಣಗಳಿರುವುದಿಲ್ಲ.

ಹಾಗೂ ಸಂಪೂರ್ಣ ನೈರ್ಮಲ್ಯ ಆಂದೋಲನ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಸಂಗ್ರಹಣೆ ನಿಯಮಗಳನ್ನು ಪಾಲಿಸದೇ ರೂ. 20.36 ಲಕ್ಷಗಳನ್ನು ವೆಚ್ಚ ಮಾಡಿರುವ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಸಪೇಟೆ ಮತ್ತು ಸಂಬಂಧಿಸಿದ ಕಿರಿಯ ಇಂಜಿನಿಯರ್‌ಗಳನ್ನು ಕೂಡಲೇ ಅಮಾನತ್ತುಗೊಳಿಸಿ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಹಾಗೂ ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಲೆಕ್ಕಾಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಲಾಗಿ, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪೆಯಲ್ಲಿ ಜರುಗಿದ ಶ್ರೀ ಕೃಷ್ಣದೇವರಾಯರ 500ನೇ ಪೀಠಾರೋಹಣಾ ಸ್ಮರಣಾರ್ಥ ಪಟ್ಟಾಭಿಷೇಕ ಆಚಾರಣೆಯ ಸಮಾರಂಭದಲ್ಲಿ ಶೌಚಾಲಯಗಳನ್ನು ಒದಗಿಸುವ

-----3

ಸಂಬಂಧ ಆ ಸಂದರ್ಭದಲ್ಲಿ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ ಹಾಗೂ ಹೊಸಪೇಟೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹೊಸಪೇಟೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಇಂಜಿನಿಯರ್ ಹಾಗೂ ಜಿಲ್ಲಾ ಪಂಚಾಯತ್, ಬಳ್ಳಾರಿಯ ಮುಖ್ಯ ಲೆಕ್ಕಾಧಿಕಾರಿ ಇವರುಗಳು ಕೆ.ಟಿ.ಪಿ.ಪಿ. ಅಧಿನಿಯಮವನ್ನು ಉಲ್ಲಂಘಿಸುವ ಜೊತೆಗೆ ಸಂಪೂರ್ಣ ನೈರ್ಮಲ್ಯ ಆಂದೋಲನದಡಿಯ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿದ್ದಲ್ಲದೇ ಹೆಚ್ಚುವರಿಯಾಗಿ ಹಣ ಪಾವತಿ ಮಾಡುವ ಮೂಲಕ ಅಕ್ರಮಗಳನ್ನು ಎಸಗಿ ಕರ್ತವ್ಯಲೋಪ ಹಾಗೂ ಹಣ ದುರುಪಯೋಗಪಡಿಸಿಕೊಂಡಿರುವ ಅಂಶವು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ, ಈ ಕೆಳಕಂಡ ಅಧಿಕಾರಿಗಳು ಎಸಗಿರುವ ಕರ್ತವ್ಯಲೋಪ ಹಾಗೂ ಹಣ ದುರುಪಯೋಗದ ಆರೋಪಗಳ ಕುರಿತಾದ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಕೂಡಲೇ ಅಮಾತ್ತಿನಲ್ಲಿಡುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿರುತ್ತದೆ.

(i) *ಶ್ರೀ ಡಿ. ವೆಂಕಟರಮಣ, ಅಂದಿನ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ).*

(ii) *ಶ್ರೀ ಡಿ.ವಿ.ವೆಂಕಟರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಸಪೇಟೆ*

(iii) *ಶ್ರೀ ಪಿ.ಎಸ್.ಪರಶುರಾಮು, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಸಪೇಟೆ.*

(iv) *ಶ್ರೀ ಬಿ.ಎಂ.ಪಂಪಯ್ಯ, ಮುಖ್ಯ ಲೆಕ್ಕಾಧಿಕಾರಿ (ಪ್ರಭಾರ), ಜಿಲ್ಲಾ ಪಂಚಾಯತ್, ಬಳ್ಳಾರಿ*

ಆದ್ದರಿಂದ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ, ಗ್ರಾಅಪ 31 ಇಎಸ್‌ಕ್ಯೂ 2011,</u>
<u>ಬೆಂಗಳೂರು, ದಿನಾಂಕ: 24-10-2011</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ಹಂಪೆಯಲ್ಲಿ ಜರುಗಿದ ಶ್ರೀ ಕೃಷ್ಣದೇವರಾಯರ 500ನೇ ಪೀಠಾರೋಹಣಾ ಸ್ಮರಣಾರ್ಥ ಪಟ್ಟಾಭಿಷೇಕ ಆಚಾರಣೆಯ ಸಮಾರಂಭದಲ್ಲಿ ಶೌಚಾಲಯಗಳನ್ನು ಒದಗಿಸುವ ಸಂಬಂಧ ಆ ಸಂದರ್ಭದಲ್ಲಿ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ ಹಾಗೂ ಹೊಸಪೇಟೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹೊಸಪೇಟೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಇಂಜಿನಿಯರ್ ಹಾಗೂ ಜಿಲ್ಲಾ ಪಂಚಾಯತ್, ಬಳ್ಳಾರಿಯ ಮುಖ್ಯ ಲೆಕ್ಕಾಧಿಕಾರಿ ಇವರುಗಳು ಕೆ.ಟಿ.ಪಿ.ಪಿ. ಅಧಿನಿಯಮವನ್ನು ಉಲ್ಲಂಘಿಸುವ ಜೊತೆಗೆ ಸಂಪೂರ್ಣ ನೈರ್ಮಲ್ಯ ಆಂದೋಲನದಡಿಯ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ ಹಣ ಪಾವತಿ ಮಾಡುವ ಮೂಲಕ ಅಕ್ರಮಗಳನ್ನು ಎಸಗಿ ಕರ್ತವ್ಯಲೋಪ

ಹಾಗೂ ಹಣ ದುರುಪಯೋಗಪಡಿಸಿಕೊಂಡಿರುವ ಈ ಕೆಳಕಂಡ ಅಧಿಕಾರಿಗಳನ್ನು ಅವರುಗಳ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 10 (1)(ಡಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿದೆ ಹಾಗೂ ಅವರುಗಳ ಹುದ್ದೆಯ ಸ್ಥಾನವನ್ನು (ಲೀನ್) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಕಛೇರಿಗೆ ವರ್ಗಾಯಿಸಿದೆ:-

(i) *ಶ್ರೀ ಡಿ. ವೆಂಕಟರಮಣ, ಅಂದಿನ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಳ್ಳಾರಿ).*

(ii) *ಶ್ರೀ ಡಿ.ವಿ.ವೆಂಕಟರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಸಪೇಟೆ*

(iii) *ಶ್ರೀ ಪಿ.ಎಸ್.ಪರಶುರಾಮು, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಸಪೇಟೆ.*

(iv) *ಶ್ರೀ ಬಿ.ಎಂ.ಪಂಪಯ್ಯ, ಮುಖ್ಯ ಲೆಕ್ಕಾಧಿಕಾರಿ (ಪ್ರಭಾರ), ಜಿಲ್ಲಾ ಪಂಚಾಯತ್, ಬಳ್ಳಾರಿ*

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಗಳು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 98ರ ಅನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/10/14

(ಎಸ್.ಯು.ಶಿವಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ / ಜಲ ಸಂಪನ್ಮೂಲ ಇಲಾಖೆ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
6. ಸಂಬಂಧಪಟ್ಟ ಅಧಿಕಾರಿಗಳಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಮುಖಾಂತರ.
7. ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ , (ಸೇ-ಎ, ಬಿ ಮತ್ತು ಸಿ)
8. ಮಾನ್ಯ ಗ್ರಾ..ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
9. ಗ್ರಾ.ಅ.ಪಂ. ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಉಪ ಕಾರ್ಯದರ್ಶಿಯವರು (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
10. ಮಾಹಿತಿ ಕೇಂದ್ರ : ಹೆಚ್ಚುವರಿ ಪ್ರತಿ: ರಕ್ಷಾ ಕಡತ : ಕಂಪ್ಯೂಟರ್ ಸೆಲ್.